ಕರ್ನಾಟಕ ವಿಧಾನ ಸಭೆ, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಆರೋಗ್ಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE: 16/6/2020

# ಟೆಸ್ಟ್, ಯಾದಗಿರಿ ಫಸ್ಟ್

■ ಮಲ್ಲಪ್ಪ ಸಂಕೀನ್ ಯಾದಗಿರಿ
mallappa.sankin@timesgroup.com

ಯಾದಗಿರಿಯು 10 ದಿನಗಳಲ್ಲಿ ಪ್ರತಿ ಒಂದು ಮಿಲಿಯನ್(ಹತ್ತು ಲಕ್ಷ) ಜನಸಂಖ್ಯೆಗಳ ಪೈಕಿ 7,297 ಕೋವಿಡ್-19 ಟೆಸ್ಟ್ ಮಾಡುವ ಮೂಲಕ ರಾಜ್ಯದಲ್ಲಿಯೇ ಹೆಚ್ಚು ಟೆಸ್ಟ್ ಮಾಡಿಸಿದ ಜಿಲ್ಲೆ ಎಂಬ ಪಟ್ಟಕ್ಕೇರಿದೆ.

ಕೊರೊನಾ ವೈರಸ್ ನಿಯಂತ್ರಣಕ್ಕಾಗಿ 30 ಜಿಲ್ಲೆಗಳಲ್ಲಿಯೂ ನಡೆಯುತ್ತಿದೆ. ಮಹಾರಾಷ್ಟ್ರದಿಂದ ವಾಪಸ್ ಬಂದಿರುವ ಕಾರ್ಮಿಕರಲ್ಲಿ ವೈರಸ್ ಆವರಿಸಿಕೊಂಡಿದೆ.

ಜ್ವರದ ಲಕ್ಷಣಗಳು, ತೀವ್ರ ಉಸಿರಾಟ ಹಾಗೂ ಸೋಂಕಿನಂತ ಲಕ್ಷಣಗಳು ಹೊಂದಿರುವ ಸಾರ್ವಜನಿಕರು ಆರೋಗ್ಯದ ತಂಡಕ್ಕೆ ಕಡ್ಡಾಯವಾಗಿ ಸಂಪರ್ಕಿಸಿ ಸ್ವಾಬ್ ಪರೀಕ್ಷೆಯನ್ನು ಮಾಡಿಸಿಕೊಳ್ಳಲು ಮುಂದಾಗಬೇಕಿದೆ. ಇದರಿಂದಾಗಿ ವೈರಸ್ ನಿಯಂತ್ರಣ ಮಾಡಲು ಸಹ ಅನುಕೂಲವಾಗುತ್ತದೆ.

**ಟೆಸ್ಟ್ ಮಾಡಿರುವ ಜಿಲ್ಲೆಗಳ ವಿವರ:** ಕಲಬುರಗಿ 4,843, ಉಡುಪಿ 4,219, ವಿಜಯಪುರ 3,891, ಬೀದರ್, 3,559, ಧಾರವಾಡ 2,369, ಬೆಂಗಳೂರು ನಗರ 2.125, ಕೊಡಗು 1,627, ಚಿಕ್ಕಬಳ್ಳಾಪುರ 1,394, ದಾವಣಗೆರೆ 1,128, ಹಾವೇರಿ 990, ರಾಮನಗರ 966, ಮೈಸೂರು 963, ಕೊಪ್ಪಳ 904, ದಕ್ಷಿಣ ಕನ್ನಡ 840, ಉತ್ತರ ಕನ್ನಡ 812, ಶಿವಮೊಗ್ಗ 775, ಹಾಸನ 695, ಮಂಡ್ಯ 653, ಕೋಲಾರ 649, ಬಳ್ಳಾರಿ 608, ಚಾಮರಾಜನಗರ 518, ತುಮಕೂರ 490, ಬೆಂಗಳೂರು ಗ್ರಾಮೀಣ 474, ಬಾಗಲಕೋಟೆ 459, ಗದಗ 458, ಬೆಳಗಾವಿ 394, ಚಿತ್ರದುರ್ಗ 369, ರಾಯಚೂರ 327, ಚಿಕ್ಕಮಂಗಳೂರ 317 ಕೋವಿಡ್ ಟೆಸ್ಟ್‌ಗಳನ್ನು ಮಾಡಲಾಗಿದೆ.



## ನಿಗಾದಲ್ಲಿ ದ.ಕ. ಪ್ರಥಮ

ಕೋವಿಡ್ ನಿಗಾವಣೆಗಾಗಿ ರಾಜ್ಯ ಸರಕಾರದಿಂದ ಕ್ವಾರಂಟೈನ್ ವಾಚ್ ಆ್ಯಪ್ ನಲ್ಲಿ ಪ್ರತಿಯೊಬ್ಬ ಕ್ವಾರಂಟೈನ್‌ಗೆ ಒಳಗಾದ ವ್ಯಕ್ತಿಗಳ ಮೇಲೆ ನಿಗಾ ಇರಿಸಲಾಗುತ್ತಿದೆ. ಈ ಆ್ಯಪ್ ಬಳಕೆಯಲ್ಲಿ ದ.ಕ. ಜಿಲ್ಲೆ ರಾಜ್ಯದಲ್ಲಿ ಮುಂಚೂಣಿಯಲ್ಲಿದೆ. ಕಂದಾಯ, ಪಂಚಾಯತ್‌ರಾಜ್, ಪೊಲೀಸ್ ಹಾಗೂ ಆರೋಗ್ಯ ಇಲಾಖೆ ಈ ಕಾರ್ಯದಲ್ಲಿ ತೊಡಗಿದ್ದು, ಸಾರ್ವಜನಿಕರು ಕೂಡ ಜಿಲ್ಲಾಡಳಿತದೊಂದಿಗೆ ಸಹಕರಿಸುತ್ತಿದ್ದಾರೆ. ಕ್ವಾರಂಟೈನ್‌ನಲ್ಲಿ ವ್ಯಕ್ತಿಗಳನ್ನಿರಿಸುವುದು ಕೇವಲ ಸಾಮಾಜಿಕ ಸ್ವಾಸ್ಥ್ಯದ ಹಿನ್ನೆಲೆಯಲ್ಲಾಗಿದ್ದು, ಅವರನ್ನು ಸಂಶಯಾಸ್ಪದವಾಗಿ ಕಾಣುವುದು ಹಾಗೂ ಮಾನಸಿಕವಾಗಿ ಕುಗ್ಗಿಸುವುದು ಸರಿಯಲ್ಲ ಎಂದು ಜಿಲ್ಲಾಡಳಿತದ ಪ್ರಕಟಣೆ ತಿಳಿಸಿದೆ.